**ಪಾಟೀ ಸವಾಲು ಃ 1, 5, 7 ರಿಂದ 10 ಮತ್ತು 12ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಕೆ ಎಂ ಎಸ್ ರವರಿಂದ ಃ-**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಿ .ಡಬ್ಲ್ಯೂ. 1. ದಿಃ 20-10-2018. ಓ ಎಸ್ ನಂ ಃ 372/2013**

ಮುದ್ದಲಿಂಗಾಚಾರ್‌ರವರಿಗೆ 5 ಜನ ಮಕ್ಕಳು. ಅವರೆಂದರೆ. 1.ತಾಂಡವಾಚಾರಿ, 2. ಗದ್ದಪ್ಪಚಾರ್, 3. ಚನ್ನಬಸವಾಚಾರ್, 4. ಚನ್ನಾಚಾರ್, ಮತ್ತು 5. ಪುಟ್ಟ ಬಸವಾಚರ್ ಎಂದರೆ ಸರಿ. ತಾಂಡವಾಚರ್ ರವರ ಮರಣ ನಂತರ ಆತನ ಹೆಂಡತಿ ಪುಟ್ಟಮ್ಮ ಮತ್ತು ತಾಂಡವಚಾರ್ ರವರ ಅಣ್ಣ–ತಮ್ಮಂದಿರು ದಿಃ 05-03-1931 ರಂದು ದಾವಾ ಆಸ್ತಿ ಮತ್ತು ಇತರೇ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ, ದಾವಾ ಆಸ್ತಿಗಳಲ್ಲದೇ ಸರ್ವೆ ನಂ. 75, 52, 52(ಎ) ಮತ್ತು ಸರ್ವೆ ನಂ. 20 ರಲ್ಲಿ ಆಸ್ತಿಗಳು ಇವೆ ಎಂದರೆ ಸಾಕ್ಷಿಯು ದಾವಾ ಅಸ್ತಿಗಳನ್ನು ಹೊರತುಪಡಿಸಿ 2 ಆಸ್ತಿಗಳು ಇರುವುದಾಗಿ ನುಡಿಯುತ್ತಾರೆ. ಸದರಿ ದಿಃ 05-03-1931ರ ವಿಭಾಗದಲ್ಲಿ ಪುಟ್ಟಮ್ಮನನ್ನು ಹೊರತುಪಡಿಸಿ ತಾಂಡವಾಚಾರ್ ರವರ ಅಣ್ಣ – ತಮ್ಮಂದಿರಿಗೆ ತಲಾ 8 ಕಾಲು ಗುಂಟೆ ಜಮೀನು ಬಂದಿರುತ್ತದೆಂದರೆ ಸರಿಯಲ್ಲ, ಅದರಂತೆ ಪ್ರತ್ಯೇಕವಾಗಿ ಅವರು ಖಾತೆ-ಪಹಣಿ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾತನ ಹೆಸರು ಚೆನ್ನಾಚಾರ್. ನನ್ನ ತಾತನಿಗೆ ಬಂದಂತಹ ಆಸ್ತಿಯನ್ನು 1941 ರಲ್ಲಿ ಚನ್ನಬಸವಚಾರ್ ಬಿನ್ ಮುದ್ದಲಿಂಗಚಾರ್ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ, ಸದರಿ ಚನ್ನಬಸವಚಾರ್ 1941 ರಿಂದ ಸದರಿ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ, ಸದರಿ ಚನ್ನಬಸವಚಾರ್‌ರವರು 1948 ರಲ್ಲಿ ಬಸವಚಾರಿ ಬಿನ್ ಚನ್ನಚಾರಿ

ರವರಿಗೆ ದಾನ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಬಸವಚಾರಿ ನನ್ನ ದೊಡ್ಡಪ್ಪ ಎಂದರೆ ಸರಿ.

ಸದರಿ ಬಸವಚಾರಿ 1952 ರಲ್ಲಿ ಗದ್ದಪ್ಪಚಾರಿ ಬಿನ್ ಮುದ್ದಲಿಂಗಚಾರ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಗದ್ದಪ್ಪಚಾರ್ ಸದರಿ ಆಸ್ತಿಯ ಖಾತೆ- ಪಹಣಿ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಗದ್ದಪ್ಪಚಾರ್ ರವರ ಮರಣ ನಂತರ ಅವರ ಹೆಂಡತಿ ಮಾಯಮ್ಮರವರು 1967 ರಲ್ಲಿ ಮುದ್ದಲಿಂಗಚಾರ್ ಬಿನ್ ಚನ್ನಚಾರ್ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಮುದ್ದಲಿಂಗಚಾರ್ ನನ್ನ ಚಿಕ್ಕಪ್ಪ ಎಂದರೆ ಸರಿ. ಸದರಿ ಮುದ್ದಲಿಂಗಚಾರ್ ಸದರಿ ಆಸ್ತಿಯ ಖಾತೆ-ಪಹಣಿ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಮುದ್ದಲಿಂಗ ಚಾರ್ ಮರಣ ಹೊಂದಿದ ನಂತರ ಆತನ ವಾರಸುದಾರರಾದ 7 ರಿಂದ 10ನೇ ಪ್ರತಿವಾದಿಗಳು ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಇತರೇ ಒಟ್ಟು ಕುಟುಂಬದ ಆಸ್ತಿಗಳಲ್ಲಿ ವಿಭಾಗವಾಗಿದ್ದರೂ ಸಹಾ ದಾವಾ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿದ್ದೇವೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ 1ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,, ಗುಬ್ಬಿ